

# ಮುಗ್ಧತೆಯನ್ನು ಗೌರವಿಸುವ ಸಜ್ಜನಿಕೆ

'ಕತ್ತಲು ಹೆಚ್ಚಾಗುತ್ತಾ ಬಂತು. ಒಳಗೆ ಬಾ' ಎಂದು ಅಜ್ಜಿ ಕರೆದರೆ ಮೊಮ್ಮಗಳಿಗೆ ಸಿಟ್ಟು. 'ಅಜ್ಜೀ ನೀ ಸುಮ್ನಿರು. ಇದೇನೋ ನಿಮ್ಮ ಹಳೇ ಕಾಲವಲ್ಲ. ರಸ್ತೆಯಲ್ಲಿ ನೋಡು... ಬೀದಿ ದೀಪ ಹಾಕಿದ್ದಾರಲ್ಲ... ನಾನು ಸ್ವಲ್ಪ ಸೈಬರ್‌ಗೆ ಹೋಗಿ ಬರ್ತೇನೆ' ಎಂದು ಸಿಡುಕುತ್ತಾಳೆ.

'ನಾನೇನೂ ಹೋಗಬೇಡ ಎನ್ನುತ್ತಿಲ್ಲ. ಅಲ್ಲೀವರೆಗೆ ನಾನೂ ನಿನ್ನ ಜೊತೆ ಬರ್ತೇನೆ. ರಸ್ತೆ ತಿರುವಿನಲ್ಲೇ ನಿಲ್ಲುತ್ತೇನೆ. ನಾನೇನು ಸೈಬರ್‌ಗೆ ಬರುವುದಿಲ್ಲ ಆಯಿತಾ...' ಎಂದು ಅಜ್ಜಿ ರಮಿಸುತ್ತಾರೆ. 'ಓಹೋಹೋ... ನನ್ನನ್ನು ಚೆಕ್ ಮಾಡುವುದಕ್ಕೇ ಬರುವುದಾ?' ಮೊಮ್ಮಗಳ ಸಿಟ್ಟು ನೆತ್ತಿಗೇರುತ್ತದೆ. ಅಜ್ಜಿಯ ಹೊಟ್ಟೆಯಲ್ಲಿ ತಳಮಳ. ಮೊಮ್ಮಗಳು ಬಿರಬಿರನೆ ಹೋದಮೇಲೆ ತುಸು ಅಂತರದಲ್ಲಿಯೇ, ಅಜ್ಜಿ ನಿಧಾನವಾಗಿ ರಸ್ತೆಯ ತಿರುವಿನವರೆಗೆ ಹೋಗಿ ನಿಲ್ಲುತ್ತಾರೆ.

ಅಷ್ಟರಲ್ಲಿ ಮಗಳು ಆಫೀಸಿನಿಂದ ಬರುವುದು ಕಾಣಿಸಿ, ಮಗಳಿಗೆ ವಿಷಯ ತಿಳಿಸಿ ಅಜ್ಜಿ ವಾಪಸ್ಸಾಗುತ್ತಾರೆ. ತುಸು ಹೊತ್ತಿನಲ್ಲಿ ಅಮ್ಮ ಮಗಳಿಬ್ಬರೂ ಮನೆಗೆ ಬಂದರೆನ್ನಿ.

ಆದರೆ ಜಗಳ ಅಲ್ಲಿಗೆ ಮುಗಿಯುತ್ತದಾ? ಇಲ್ಲ. ಮೊಮ್ಮಗಳ ಜೊತೆ ತಾಳ್ಮೆಯಿಂದ ಇರುವ ಅಜ್ಜಿ, ಮಗಳ ಮೇಲೆ ಹರಿಹಾಯುತ್ತಾರೆ. 'ಸಮಾನತೆ ಅದೂ ಇದೂ ಅಂತ ಮೊಮ್ಮಗಳ ತಲೆ ಹಾಳು ಮಾಡಿದ್ದಿ. ನಿನ್ನ ಎಲ್ಲ ವಾದಗಳೂ ಕಾಲೇಜಿನಲ್ಲಿ, ವೇದಿಕೆಯಲ್ಲಿ ಭಾಷಣ ಮಾಡಲಿಕ್ಕೆ ಮಾತ್ರ ನೆನಪಿಟ್ಟುಕೊ. ನಿನ್ನ ಸ್ವಂತ ಮಗಳ ಮೇಲೆ ಅದನ್ನೆಲ್ಲ ಹೇರಿ, ಅವಳನ್ನು ಅಷ್ಟು ನಿರ್ಲಕ್ಷ್ಯ ಮಾಡಬೇಡ' ಎನ್ನುವುದು ಅವರ ಸಿಟ್ಟಿನ ಮಾತುಗಳ ತಾತ್ಪರ್ಯ.

ಯಾವಾಗಲೂ ಅಮ್ಮನೊಡನೆ ವಾದಕ್ಕೆ ಟೊಂಕ ಕಟ್ಟಿ ನಿಲ್ಲುವ ಮಗಳು, ಈಗ ಮೌನ. ಮಗಳ ಬಿಡುಬೀಸುತನ ಅಮ್ಮನ ಹೊಟ್ಟೆಯಲ್ಲಿ ಸಣ್ಣ ಕಂಪನವನ್ನು ಹುಟ್ಟಿಸಿದೆ. ಲಿಂಗಸಮಾನತೆಯ ಅಂಶಗಳ ಬಗ್ಗೆ ಅರಿವು, ಬರಹ, ಭಾಷಣ ಎಲ್ಲವೂ ಸರಿ. ಹಾಗೆಂದು ಮಗಳು, 'ಮಧ್ಯರಾತ್ರಿ ಬಾಯ್ಸ್ ಬೈಕ್ ರೈಡಿಂಗ್‌ಗೆ ಹೋಗ್ತಾರೆ. ನಾನು ಜಗತ್ತು ಎಚ್ಚರವಿರುವಾಗ ಸೈಬರ್‌ಗೆ ಹೋಗ್ಬಾರ್ದಾ' ಅಂತ ಗಟ್ಟಿ ದನಿಯಲ್ಲಿ ಕೇಳುತ್ತಿದ್ದಾಳೆ. ಅವಳು ಹೋಗುವ ಜಾಗ ನಿಜಕ್ಕೂ ಸುರಕ್ಷಿತವಾ ಎಂದು ಒಂದೆರಡು ಪ್ರಶ್ನೆ ಮಾಡಿದರೆ, '.ಸೀ.. ಯು ಆಲ್ಸೋ ಡೋಂಟ್ ಬಿಲೀವ್ ಮಿ' ಎಂದು ಮೂಲಕ್ಕೆ ಕೈಹಾಕುತ್ತಾಳೆ.

'ಅದು ನಿನ್ನ ಮೇಲಿನ ನಂಬಿಕೆಯ ಪ್ರಶ್ನೆ ಅಲ್ಲ. ಅಲ್ಲಿಗೆ ಬರುವ ಎಲ್ಲರಿಗೂ ಈ ಲಿಂಗಸಮಾನತೆಯ ಅರಿವು ಇರುತ್ತದೆಯೆ? ನಮ್ಮ ಸುರಕ್ಷತೆಯನ್ನು ನಾವೇ ಮಾಡಿಕೊಳ್ಳಬೇಕಲ್ಲವೇ? ಇಷ್ಟಕ್ಕೂ ನೀನು ಹೋಗಬೇಡ ಎಂದಿಲ್ಲ. ಜೊತೆಗೊಬ್ಬರು ಇರಲಿ ಎಂದಷ್ಟೇ ಹೇಳಿದ್ದು' ಎಂಬ ವಿವರಣೆ ಕೇಳಲು ಅವಳಿಗೆಲ್ಲಿದೆ ವ್ಯವಧಾನ?

ಎಷ್ಟೋಂದು ಮನೆಗಳಲ್ಲಿ ಹೀಗಾಗುತ್ತದೆ. ಲಿಂಗಸಮಾನತೆ, ಅರಿವಿನ ಕುರಿತು ಮಾತನಾಡುವಾಗ ಅಂತರಂಗದ ಆಶಯ ಮಾತುಗಳಲ್ಲಿ ಪ್ರತಿಫಲಿಸುತ್ತದೆ. ನಮ್ಮ ಸಮಾಜ ಇನ್ನಷ್ಟು ಸೂಕ್ಷ್ಮತೆಯನ್ನು ಬೆಳೆಸಿಕೊಳ್ಳಬೇಕು ಎಂಬ ಆಶಯ ಆ ಮಾತುಗಳ ಹಿಂದಿರುತ್ತದೆ. ಆದರೆ ಆಶಯಗಳು ಮತ್ತು ವಾಸ್ತವ ಸಮಾನರೇಖೆಗೆ ಬರಲು ಇನ್ನಷ್ಟು ಸಮಯ ಬೇಕಲ್ಲವೇ. ಈ ತೆಳು ಅಂತರವನ್ನು ಗುರುತಿಸುವುದು ಸ್ವಲ್ಪ ಕಷ್ಟದ ಕೆಲಸ. ಸಿದ್ಧ ಮಾದರಿಗಳನ್ನು ನಾವು ನಮ್ಮ ಮಕ್ಕಳ ಮೂಲಕ ಮುರಿಯದೇ ಇದ್ದರೆ ಸಾಮಾಜಿಕ ಬದಲಾವಣೆ ಸಾಧ್ಯವಿಲ್ಲ. ಆದರೆ ಹಾಗೆ ಮಾದರಿಗಳನ್ನು ಮುರಿಯುವ ಭರಾಟೆಯಲ್ಲಿ ಮಕ್ಕಳ ಬದುಕಿಗೆ ಹಾನಿಯಾಗದಂತೆ ನೋಡಿಕೊಳ್ಳುವುದೂ ಮುಖ್ಯ.

ಆಶಯ ಮತ್ತು ವಾಸ್ತವತೆಯ ನಡುವಿನ ವ್ಯತ್ಯಾಸ 'ಲಿಂಗಸಮಾನತೆ' ಎಂಬ ಒಂದೇ ವಿಚಾರಕ್ಕೆ ಸೀಮಿತವಾಗಿಲ್ಲ. ಸಮಾಜದ ಆರೋಗ್ಯ ಚೆನ್ನಾಗಿರಬೇಕು ಎಂಬ ಆಶಯವನ್ನು ಹೊಂದಿರುವ ಎಲ್ಲ ಕ್ಷೇತ್ರಗಳಿಗೂ ಅನ್ವಯಿಸುತ್ತದೆ.

ಇತ್ತೀಚೆಗೆ ಅಮೆಝಾನ್ ಪ್ರೈಮ್‌ನ 'ರಸ್‌ಭರಿ' ಎಂಬ ವೆಬ್‌ಶೋದಲ್ಲಿ ಪುಟ್ಟ ಬಾಲಕಿಯೊಬ್ಬಳ ನೃತ್ಯದ ಬಗ್ಗೆ ಭಾರೀ ಚರ್ಚೆಗಳು ನಡೆದವು. ಪ್ರಚೋದನಾತ್ಮಕವಾದ ಭಾವಗಳನ್ನು ಸ್ಫುರಿಸುವ ಹಾಡೊಂದಕ್ಕೆ ಪುಟಾಣಿ ಹುಡುಗಿ ನೃತ್ಯ ಮಾಡುತ್ತಿದ್ದಳು. ತಾನು ನಟಿಸುತ್ತಿರುವ ಭಾವದ ಅರ್ಥವೇನು ಎಂಬುದು ಅವಳಿಗೆ ಅರಿವಿರಲಿಲ್ಲ. ಅವಳ ನೃತ್ಯ ನೋಡುತ್ತ, ಒಂದಷ್ಟು ಮಂದಿ 'ಆನಂದಿ'ಸುತ್ತಿದ್ದರು. ಇದು ಎಷ್ಟು ಸರಿ ಎಂಬ ಪ್ರಶ್ನೆಯನ್ನಿರಿಸಿಕೊಂಡು ಚರ್ಚೆಗಳು ನಡೆದವು.

'ಎದೆ ತುಂಬಿ ಹಾಡಿದೆನು' ಎಂಬ ಸಂಗೀತದ ರಿಯಾಲಿಟಿ ಶೋದಲ್ಲಿ ತೀರ್ಪುಗಾರರಾಗಿದ್ದ ಎಸ್.ಪಿ. ಬಾಲಸುಬ್ರಹ್ಮಣ್ಯಂ ಪದೇ ಪದೇ ಒಂದು ಮಾತು ಹೇಳುತ್ತಿದ್ದರು. "ಪುಟ್ಟ ಮಕ್ಕಳ ಮುಗ್ಧತೆಗೆ ಹೊಂದುವ ಹಾಡುಗಳನ್ನೇ ಮಕ್ಕಳಿಗೆ ಕಲಿಸಿ. ವಯಸ್ಕರ ಹಾಡುಗಳನ್ನು ಮಕ್ಕಳಿಗೆ ಕಲಿಸಿ, ಮೂಲರೂಪದಂತೆಯೇ ಅವರು ಅದನ್ನು ಹಾಡಿದಾಗ 'ಅದ್ಭುತ' ಎಂದು ಹೇಳುವುದು ಸರಿಯಲ್ಲ".

ಮಕ್ಕಳ ಈ ಕ್ಷಣವನ್ನು ಗೌರವಿಸುವುದಕ್ಕಿಂತ ದೊಡ್ಡ ಸಜ್ಜನಿಕೆ ಮತ್ತೊಂದಿಲ್ಲ.

■ ಸ್ವಯಂಪ್ರಭಾ